

ಸಂಪಾದಕೀಯ

# ಶ್ರೀರಾಮಕೃಷ್ಣರ ವೇದಾಂತ – ೨

ಆಧ್ಯಾತ್ಮಿಕ ವಿಚಾರಗಳನ್ನು ಸರಳವಾಗಿ ವಿವರಿಸಲು ಶ್ರೀರಾಮಕೃಷ್ಣರು ಅನೇಕ ಕಥೆಗಳನ್ನು, ಉದಾಹರಣೆ-ದೃಷ್ಟಾಂತಗಳನ್ನು ನಡುನಡುವೆ ಬಳಸುತ್ತಿದ್ದರು. ಇದರಿಂದ ಹಲವು ಗಹನ ತತ್ತ್ವಗಳನ್ನೂ, ವಿಚಾರಗಳನ್ನೂ ಸಾಮಾನ್ಯರಿಗೆ ಮನಮುಟ್ಟುವಂತೆ ರಸವತ್ತಾಗಿ ತಿಳಿಸಿಕೊಡುವುದು ಸಾಧ್ಯವಾಗುತ್ತಿತ್ತು. ಶ್ರೀರಾಮಕೃಷ್ಣರ ಬೋಧನೆಗಳು ಎಲ್ಲರಿಗೂ ಪ್ರಿಯವಾಗುವುದಕ್ಕೆ ಇದೇ ಒಂದು ಪ್ರಧಾನ ಕಾರಣ. ಶ್ರೀರಾಮಕೃಷ್ಣರ ಹಲವು ದೃಷ್ಟಾಂತಗಳು ವೇದಾಂತ ಭಾವಗಳಿಂದ ತುಂಬಿ ತುಳುಕಾಡುತ್ತವೆ. ಕೆಲವು ಉದಾಹರಣೆಗಳು ಇಲ್ಲಿವೆ:

### ಕತ್ತಲು ಕೋಣೆ ಮತ್ತು ಬೆಳಕು

''ಭಗವಂತನ ಕೃಪೆಯೊಂದು ದೊರೆಯಿತು ಎಂದರೆ, ಒಂದು ಮುಹೂರ್ತದೊಳಗೇ ಈ ಅಷ್ಟಪಾಶಗಳೂ ನಮ್ಮನ್ನು ಬಿಟ್ಟು ತೊಲಗಬಹುದು. ಇದು ಹೇಗೆ ಗೊತ್ತೆ? ಒಂದು ಪಕ್ಷ ಸಾವಿರಾರು ವರ್ಷಗಳಿಂದ ಒಂದು ಕೊಠಡಿ ಕತ್ತಲೆಯಾಗಿಯೇ ಇತ್ತು ಅಂತ ಇಟ್ಟುಕೊ. ಅಲ್ಲಿಗೆ ಬೆಳಕು ತಂದೊಡನೆಯೇ ಕತ್ತಲೆ ಪರಾರಿಯಾಗಿ ಬಿಡುತ್ತದೆ; ಕಿಂಚಿತ್ ಕಿಂಚಿತ್ತಾಗೇನೂ ಅಲ್ಲ.''

*(ಶ್ರೀರಾಮಕೃಷ್ಣ ವಚನವೇದ ಸಂ.೧, ಪು.೨೮೪)*

ಈ ಉದಾಹರಣೆಯ ಮೂಲಕ ಸಾಕ್ಷತ್ಕಾರದ ಪ್ರಖರತೆ ಎಂಥದೆಂಬುದನ್ನು ವಿವರಿಸುತ್ತಾರೆ ಶ್ರೀರಾಮಕೃಷ್ಣರು. ಭಗವತ್ಕೃಪೆ ಎಂಬುದು ಭಕ್ತಿಪರಂಪರೆಯಲ್ಲಿ ಅತ್ಯಂತ ಮುಖ್ಯವಾದ ಒಂದು ಅಂಗ. ಜ್ಞಾನ ಪರಂಪರೆಯಲ್ಲಿ ಕೃಪೆಗಿಂತ, ವಿಚಾರ ಮಾರ್ಗಕ್ಕೆ ಒತ್ತು ನೀಡಲಾಗಿದೆ. ಎರಡೂ ಮಾರ್ಗಗಳಿಂದ ಭಗವಂತನನ್ನು ಪಡೆಯಬಹುದು; ಅದಕ್ಕೆ ವೇದಾಂತ ತತ್ತ್ವದಲ್ಲಿ ಅವಕಾಶವಿದೆ. ಆದರೆ ಮುಖ್ಯವಾದ ವಿಚಾರ, ಸಾಕ್ಷಾತ್ಕಾರದಿಂದ ಜೀವನಿಗೆ ಲಭಿಸುವ ಅನುಭವ ಅಪ್ರತಿಮವಾಗಿದೆ; ಹಿಂದಿನ ಎಲ್ಲ ಕಷ್ಟಪರಂಪರೆಗಳಿಂದಲೂ, ಅಜ್ಞಾನದ ಆವರಣಗಳಿಂದಲೂ ಮುಕ್ತಿ ಲಭಿಸಿದರೆ ವ್ಯಕ್ತಿಯು ಶಾಶ್ವತ ಆನಂದವನ್ನು ಹೊಂದಬಲ್ಲ – ಎಂಬುದು. ಕತ್ತಲೆ ಕೋಣೆಯ ಉದಾಹರಣೆ ಅಜ್ಞಾನವು ಅನಂತ ಕಾಲದಿಂದ, ಅಸಂಖ್ಯಾತ ಜನ್ಮಗಳಿಂದ ಮುಂದುವರಿದುಕೊಂಡು ಬಂದುದನ್ನು ಸೂಚಿಸುತ್ತದೆ. ಆದರೆ ಬೆಳಕು ಸೂಚಿಸುವ ಜ್ಞಾನ ಅಥವಾ ಭಗವತ್ಕೃಪೆ ಹಿಂದಿನ ಎಲ್ಲ ಕತ್ತಲೆಯನ್ನೂ ಒಂದು ಕ್ಷಣದಲ್ಲೇ ನಾಶ ಮಾಡಬಲ್ಲದು.

ಕಾಲದ ದೃಷ್ಟಿಯಿಂದ ಒಂದು ಕ್ಷಣವೆಂಬುದು ಅತ್ಯಂತ ಸಣ್ಣ ಘಟಕ. 'ಸಾವಿರಾರು ಜನ್ಮಗಳಿಂದ ಸಂಚಿತವಾಗಿದ್ದ ಕರ್ಮಗಳೆಲ್ಲವೂ ಒಂದು ಕ್ಷಣದಲ್ಲಿ ಭಸ್ಮವಾಗಬಲ್ಲುದೆ? ಅಸಾಧ್ಯ' ಎಂದು ಸಂದೇಹಪಡುವವರಿಗೆ ಇದು ಸೂಕ್ತವಾದ ಉತ್ತರ ನೀಡುತ್ತದೆ. ವೇದಾಂತದ ಪ್ರಕಾರ, ವ್ಯಕ್ತಿಯೊಬ್ಬನು ಸಾಧನೆಯ ಮೂಲಕ ಸಿದ್ಧನಾಗಿದ್ದರೆ, ಒಂದು ಕ್ಷಣದಲ್ಲೇ ಸಾಕ್ಷಾತ್ಕಾರವುಂಟಾಗುವುದು. ಅದ್ವೈತ ತತ್ತ್ವದ ಪ್ರಕಾರ, ಬ್ರಹ್ಮಜ್ಞಾನವೆಂಬುದು ಯಾವ ಕ್ಷಣದಲ್ಲಾದರೂ ಉಂಟಾಗಬಹುದು. ವ್ಯಕ್ತಿ ಸಿದ್ಧನಾಗಬೇಕು, ಅಷ್ಟೆ. ಅಂತೆಯೇ ಭಕ್ತಿ ಪರಂಪರೆಗಳ ಪ್ರಕಾರ, ಯಾವಾಗ ಬೇಕಾದರೂ ಭಗವಂತನ ಕೃಪೆ ಲಭಿಸಬಹುದು – ಅದು ಲಭಿಸಿದಾಗಲೇ ಮುಕ್ತಿ. ಆದರೆ ಅದಕ್ಕೆ ಬೇಕಾಗಿರುವ ಸಿದ್ಧತೆ ಎಷ್ಟು? ಸಾಧನೆ ಎಷ್ಟು ಕಾಲ ಮಾಡಬೇಕು? – ಇದು ಆಯಾ ವ್ಯಕ್ತಿ ಎಷ್ಟರಮಟ್ಟಿಗೆ ಆಧ್ಯಾತ್ಮಿಕವಾಗಿ ಮುಂವರಿದಿದ್ದಾನೆ ಎಂಬುದನ್ನು ಅವಲಂಬಿಸಿಕೊಂಡಿರುತ್ತದೆ.

### ಲಾಟೀನು ಮತ್ತು ಗುಡುಗುಡಿ

''ಒಬ್ಬನಿಗೆ ಗುಡುಗುಡಿ ಸೇದಲು ಇಚ್ಛೆಯಾಯಿತು. ಅದನ್ನು ಹೊತ್ತಿಸಿಕೊಳ್ಳಲು ಆತ ಪಕ್ಕದ ಮನೆಗೆ ಹೋದ. ಆಗಲೇ ಬಹಳವಾಗಿ ರಾತ್ರಿಯಾಗಿಬಿಟ್ಟಿತು. ಅವರು ನಿದ್ದೆಮಾಡುತ್ತಿದ್ದರು. ಬಹಳ ಹೊತ್ತು ಕದ ತಟ್ಟಿದ ನಂತರ ಒಬ್ಬ ಎದ್ದು ಬಂದು ಬಾಗಿಲು ತೆರೆದ. ಈತನನ್ನು ನೋಡಿ ಆತ ಕೇಳಿದ: 'ಏನಯ್ಯ, ಏನು ಸಮಾಚಾರ?' ಈತ ಹೇಳಿದ: 'ಏನು ಊಹಿಸಲಾರೆಯಾ? ನನಗೆ ಹೊಗೆಸೊಪ್ಪಿನ ನಶೆ ಇರುವುದು ನಿನಗೆ ಗೊತ್ತೇ ಇದೆಯಲ್ಲ, ಗುಡುಗುಡಿ ಹೊತ್ತಿಸಿಕೊಳ್ಳಲು ಬಂದಿದ್ದೇನೆ.' ಆಗ ಆತ ನಕ್ಕು ಹೇಳಿದ: 'ಹಹಹಃ! ನಿನ್ನ ಬುದ್ಧಿ ಒನಕೆ ಚಿಗುರೇ! ಇಷ್ಟು ಶ್ರಮ ವಹಿಸಿ ಬಂದದ್ದೂ ಅಲ್ಲದೆ ಜೊತೆಗೆ ಇಷ್ಟೊಂದು ಕದ ತಟ್ಟಿದ್ದೂ ಬೇರೆ! ನಿನ್ನ ಕೈಯಲ್ಲೆ ಉರಿಯುತ್ತಿರೋ ಲಾಟೀನು ಇದೆಯಲ್ಲ!' (ಎಲ್ಲರೂ ನಗುತ್ತಿದ್ದಾರೆ.) '' *(ಅಲ್ಲೇ, ಪು.೨೮೪)*

ಪ್ರತಿಯೊಬ್ಬನ ಅಂತರಂಗದಲ್ಲೂ ಭಗವಂತನಿದ್ದಾನೆ, ಆದರೆ ಎಲ್ಲರೂ ಅವನಿಗಾಗಿ ಅಲ್ಲಿ, ಇಲ್ಲಿ ಹುಡುಕುತ್ತಾರೆ. ಶ್ರೀರಾಮಕೃಷ್ಣರು

ನೀಡುವ ಈ ದೃಷ್ಟಾಂತದಲ್ಲಿ ಮಾನವನ ಬುದ್ಧಿಹೀನತೆಯನ್ನು ವಿಡಂಬನೆ ಮಾಡಲಾಗಿದೆ. ಉಪನಿಷತ್ತುಗಳು ಆತ್ಮನ ಸ್ವರೂಪವನ್ನು ವಿವರಿಸುತ್ತ, **'ಸರ್ವಭೂತಾಂತರಾತ್ಮಾ'** ಎನ್ನುತ್ತವೆ. ಎಲ್ಲ ಜೀವಿಗಳ ಅಂತರಾತ್ಮವಾಗಿರುವ ಆತ್ಮವನ್ನು ಕಂಡುಕೊಳ್ಳುವುದು ಮುಖ್ಯ. ಪ್ರತಿಯೊಬ್ಬರ ಅಂತರ್ಯದಲ್ಲಿಯೂ ಭಗವಂತನಿದ್ದಾನೆ ಎಂಬ ಸತ್ಯವನ್ನು ಉಪನಿಷತ್ತು, ಗೀತೆ ಹಲವಾರು ವಾಕ್ಯಗಳ ಮೂಲಕ ಒತ್ತಿ ಹೇಳಿದ್ದರೂ, ನಮ್ಮ ಪರಂಪರೆಯಲ್ಲಿ ಜನಸಾಮಾನ್ಯರನ್ನು ಕಡೆಗಣಿಸಿ, ಬಹುಪಾಲು ಜನರಿಗೆ ಸ್ವತಂತ್ರವಾಗಿ ಬದುಕುವ ಹಕ್ಕನ್ನೇ ಕಸಿದುಕೊಳ್ಳಲಾಗಿತ್ತು. ಈ ಹಿನ್ನೆಲೆಯಲ್ಲಿ ಶ್ರೀರಾಮಕೃಷ್ಣರು ಮಾನವರೆಲ್ಲರ ದೈವತ್ವವನ್ನು ಸಾರಿದುದು ಒಂದು ರೀತಿಯಲ್ಲಿ ವೇದಾಂತ ದರ್ಶನದ ಪುನರುತ್ಥಾನವಾಗಿದೆ ಎನ್ನಬೇಕು. ಸ್ವಾಮಿ ವಿವೇಕಾನಂದರು ಈ ವಿಚಾರಗಳನ್ನೇ ತಮ್ಮ ವೇದಾಂತ ಪ್ರಚಾರಕ್ಕೆ ಪ್ರಧಾನ ತತ್ತ್ವವನ್ನಾಗಿ ಅಳವಡಿಸಿಕೊಂಡಿದ್ದರು.

## ಹುಲಿಮರಿ ಮತ್ತು ಆಡಿನ ಮಂದೆ

ವೇದಾಂತದಲ್ಲಿ ಬಳಸಿರುವ ಈ ದೃಷ್ಟಾಂತವನ್ನೇ ಶ್ರೀರಾಮಕೃಷ್ಣರು ನೇರವಾಗಿ ಭಕ್ತರ ಮುಂದೆ ವಿವರಿಸಿ ಹೇಳುತ್ತ ಯಾವ ರೀತಿ ನಮ್ಮ ನೈಜ ಸ್ವರೂಪವನ್ನು ಅರಿಯದೆ ನಾವು ಅಜ್ಞಾನದಿಂದ ತೊಳಲಾಡುತ್ತಿದ್ದೇವೆ ಎಂಬುದನ್ನು ವಿವರಿಸುತ್ತಾರೆ :

ಒಂದು ಹೆಣ್ಣು ಹುಲಿ ಒಮ್ಮೆ ಒಂದು ಆಡಿನ ಮಂದೆಯ ಮೇಲೆ ಬಿತ್ತು. ಒಬ್ಬ ಬೇಡ ದೂರದಿಂದಲೇ ಅದನ್ನು ಕಂಡು ಆ ಹೆಣ್ಣು ಹುಲಿಯನ್ನು ಕೊಂದು ಹಾಕಿದ. ಅದರ ಹೊಟ್ಟೆಯಲ್ಲಿ ಮರಿ ಇತ್ತು. ಅದು ಸಾಯುವಾಗ ಮರಿ ಪ್ರಸವವಾಗಿ ಹೋಯಿತು. ಆ ಮರಿ ಆಡುಗಳೊಡನೆ ಬೆಳೆಯಲಾರಂಭಿಸಿತು. ಮೊದಲು ಆಡುಗಳು ಅದಕ್ಕೆ ತಮ್ಮ ಮೊಲೆಯನ್ನು ಕೊಟ್ಟವು. ಸ್ವಲ್ಪ ಬೆಳೆದ ಮೇಲೆ ಅದೂ ಹುಲ್ಲು ತಿನ್ನಲಾರಂಭಿಸಿತು. ಅದೂ ಅಲ್ಲದೆ ಆಡುಗಳ ಹಾಗೆ 'ಬ್ಯಾ, ಬ್ಯಾ' ಅಂತ ಅರಚಲಾರಂಭಿಸಿತು. ಕ್ರಮೇಣ ಆ ಮರಿ ದೊಡ್ಡ ಹುಲಿಯಾಗಿ ಬೆಳೆಯಿತು; ಅದರೂ ಅದು ಇನ್ನೂ ಹುಲ್ಲು ತಿನ್ನುತ್ತ 'ಬ್ಯಾ, ಬ್ಯಾ' ಅಂತ ಅರಚುತ್ತಲೆ ಇತ್ತು. ಬೇರೆ ಯಾವುದಾದರೂ ಮೃಗ ಮಂದೆಯ ಮೇಲೆ ಬಿದ್ದರೆ ಅದೂ ಆಡುಗಳ ಹಾಗೆ ಓಡಿಹೋಗಿ ತಪ್ಪಿಸಿಕೊಳ್ಳುತ್ತಿತ್ತು. ಒಂದು ದಿನ ಒಂದು ಭಯಂಕರ ಹುಲಿ ಆ ಮಂದೆಯ ಮೇಲೆ ಬಿತ್ತು. ಅದಕ್ಕೆ ಆಡುಗಳ ಮಧ್ಯೆ ಒಂದು ಹುಲಿ ಹುಲ್ಲು ಮೇಯುತ್ತಿರುವುದನ್ನು ಮತ್ತು ಅವುಗಳ ಹಾಗೆ ಅದೂ ಓಡಿಹೋಗಿ ತಪ್ಪಿಸಿಕೊಳ್ಳಲು ಪ್ರಯತ್ನ ಮಾಡುತ್ತಿರುವುದನ್ನು ನೋಡಿ ಅತ್ಯಾಶ್ಚರ್ಯವಾಯಿತು. ಆಗ ಅದು ಆಡುಗಳ ಗೋಜಿಗೆ ಹೋಗದೆ ಆ ಹುಲ್ಲು ತಿನ್ನುತ್ತಿದ್ದ ಹುಲಿಯನ್ನು ಹಿಡಿಯಿತು. ಅದು 'ಬ್ಯಾ, ಬ್ಯಾ' ಅಂತ ಅರಚುತ್ತ ತಪ್ಪಿಸಿಕೊಳ್ಳಲು ಪ್ರಯತ್ನ ಮಾಡಲಾರಂಭಿಸಿತು. ಆಗ ಆ ಕಾಡಿನ ಹುಲಿ ಆ ಹುಲ್ಲು ತಿನ್ನುತ್ತಿದ್ದ ಹುಲಿಯನ್ನು ನೀರಿನ ಹತ್ತಿರಕ್ಕೆ ಎಳೆದುಕೊಂಡು ಹೋಗಿ ಹೇಳಿತು: 'ಈಗ ನೋಡು ನೀರಿನಲ್ಲಿ ನಿನ್ನ ಮುಖವನ್ನು, ದಿಟ್ಟಿಸಿ ನೋಡು, ನಿನಗೆ ಹುಲಿಯ ಗಡಿಗೆಮುಖದಂಥ ಮುಖ ಇರುವುದನ್ನು; ಅದು ಥೇಟ್ ನನ್ನದರ ಹಾಗೇ ಇದೆ.' ಅನಂತರ ಅದು ಅದರ ಬಾಯಿಗೆ ಒಂದು ಮಾಂಸದ ತುಂಡನ್ನು ತುರುಕಿತು. ಮೊದಲು ಆ ಹುಲ್ಲು ತಿನ್ನುವ ಹುಲಿ ಮಾಂಸವನ್ನು ತಿನ್ನದೆ ಉಗುಳಲಾರಂಭಿಸಿತು. ಆದರೆ ಆ ಪ್ರಯತ್ನದಲ್ಲಿ ಅದಕ್ಕೆ ಮಾಂಸದ ರುಚಿ ದೊರೆತು ಅದನ್ನು ತಿನ್ನತೊಡಗಿತು. ಕೊನೆಯಲ್ಲಿ ಆ ಕಾಡಿನ ಹುಲಿ ಆ ಹುಲ್ಲು ತಿನ್ನುತ್ತಿದ್ದ ಹುಲಿಗೆ ಹೇಳಿತು: 'ಇದು ಹುಲಿಯ ಜಾತಿಗೆ ಎಷ್ಟು ಅಪಮಾನಕರ! ನೀನು ಆಡುಗಳೊಡನೆ ಇದ್ದುಕೊಂಡು ಅವುಗಳ ಹಾಗೆ ಹುಲ್ಲು ಮೇಯುತ್ತಿದ್ದೆಯಲ್ಲ!' ಆಗ ಆ ಹುಲ್ಲು ತಿನ್ನುತ್ತಿದ್ದ ಹುಲಿಗೆ ಬಹಳ ನಾಚಿಕೆಯಾಗಿಬಿಟ್ಟಿತು.

ಕಾಮಕಾಂಚನಗಳನ್ನು ಅನುಭವಿಸುವುದೇ ಹುಲ್ಲು ತಿಂದ ಹಾಗೆ. ಆಡುಗಳ ಹಾಗೆ 'ಬ್ಯಾ, ಬ್ಯಾ' ಅನ್ನುವುದು ಮತ್ತು ಅವುಗಳ ಹಾಗೆ ಓಡಿ ತಪ್ಪಿಸಿಕೊಳ್ಳುವುದೇ ಸಾಮಾನ್ಯ ಜೀವನ ಹಾಗೆ ವರ್ತಿಸುವಿಕೆ. ಕಾಡಿನ ಹುಲಿಯೊಡನೆ ಹೋಗುವುದೇ ಆತ್ಮಜಾಗೃತಿಯನ್ನುಂಟುಮಾಡುವ ಗುರುವಿಗೆ ಶರಣಾಗತನಾಗುವಿಕೆ ಮತ್ತು ಆತನೇ ಪರಮಬಂಧು ಎಂದು ಅರಿಯುವಿಕೆ. ಸ್ವಷ್ಟವಾಗಿ ತನ್ನ ಮುಖವನ್ನು ನೋಡುವುದೇ ಸ್ವಸ್ವರೂಪವನ್ನು ಅರಿಯುವಿಕೆ.'' *(ಅಲ್ಲೇ, ಪು.೩೫೯)*

ಸ್ವಾಮಿ ವಿವೇಕಾನಂದರೂ ಈ ಕಥೆಯನ್ನು ತಮ್ಮ ಪ್ರವಚನಗಳ ನಡುವೆ ಬಳಸಿಕೊಂಡಿದ್ದರು. ನಮ್ಮೆಲ್ಲ ಅಜ್ಞಾನ, ಗೊಂದಲ, ಕಷ್ಟಪರಂಪರೆಗಳಿಗೆ ನಮ್ಮನ್ನು ಅನಾದಿ ಕಾಲದಿಂದ ಆವರಿಸಿರುವ ತಪ್ಪು ತಿಳುವಳಿಕೆಯೇ ಕಾರಣ. ಇದನ್ನೇ ಅವಿದ್ಯೆ, ಮಾಯೆ ಎಂಬುದಾಗಿ ವೇದಾಂತವು ಗುರುತಿಸುತ್ತದೆ. ನಮ್ಮ ನೈಜಸ್ವರೂಪವೇ ಭಗವಂತ; ನಾವೇ ಬ್ರಹ್ಮ ಅಥವಾ ಆತ್ಮ. ಈ ಸತ್ಯವನ್ನರಿಯದೆ ನಾವು ಬೇರೇನನ್ನೋ ಅರಸಿ ತೊಳಲಾಡುತ್ತಿದ್ದೇವೆ. ನಿಜವಾದ ಸುಖ, ಶಾಶ್ವತವಾದ ಆನಂದ ಹೊರಗಿಲ್ಲ, ಪ್ರಪಂಚದಲ್ಲಿ ಲಭಿಸದು. ಅದು ನಮ್ಮ ಅಂತರ್ಯದಲ್ಲಿದೆ – ನಮ್ಮೊಳಗೆ ಅಡಗಿರುವ ಭಗವಂತನಲ್ಲಿದೆ. ಈ ಸತ್ಯವನ್ನು ಮಾನವನು ಅರಿತುಕೊಂಡಾಗ ಅವನಿಗೆ ಆತ್ಮಭಾವವುಂಟಾಗುವುದು. ಯಾವಾಗ ಮಾನವನು ತನ್ನ ಅಂತರ್ಯದಲ್ಲಿ ಅಡಗಿರುವ ಸತ್ಯವನ್ನು ಕಂಡುಕೊಳ್ಳುವನೋ, ಆಗ ಅವನಿಗೆ ಹುಲಿಮರಿಯಂತೆ ಅಪರಿಮಿತ ಶಕ್ತಿ ಬರುವುದು. ಸ್ವಾಮಿ ವಿವೇಕಾನಂದರು ಇದನ್ನೇ ಈ ರೀತಿ ಹೇಳುತ್ತಾರೆ: ''ನಿಜವಾದ ಆತ್ಮನ ವಿಷಯವನ್ನು ನೀವು ಕೇಳಿ, ಇತರರಿಗೆ ಬೋಧಿಸಿ. ನಿದ್ರಿಸುವವರನ್ನು ಎಬ್ಬಿಸಿ. ಅವರು ಹೇಗೆ ಜಾಗೃತರಾಗುತ್ತಾರೆ ಎಂಬುದನ್ನು ನೋಡಿ. ಆಗ ಶಕ್ತಿ ಬರುವುದು, ಮಹಿಮೆ ಬರುವುದು, ಶ್ರೇಯಸ್ಸು ಬರುವುದು, ಪಾವಿತ್ರ್ಯ ಬರುವುದು. ಈಗ ನಿದ್ರಿಸುತಿರುವ ಜೀವ ಜಾಗೃತವಾಗಿ ಕಾರ್ಯೋನ್ಮುಖನಾಗುವಾಗ ಅವನಲ್ಲಿ ಎಲ್ಲ ಕಲ್ಯಾಣಗುಣಗಳೂ ಬರುವುವು.'' *(ಸ್ವಾಮಿ ವಿವೇಕನಂದರ ಕೃತಿಶ್ರೇಣಿ, ಸಂ.೩.ಪು.೨೨)*

ಅಜ್ಞಾನದ ನಿವಾರಣೆಯಲ್ಲಿ ಗುರುವಿನ ಮಹತ್ವ ವಿಶೇಷವಾಗಿ ಇದೆ ಎಂಬುದನ್ನು ಈ ಕಥೆ ತಿಳಿಸಿಕೊಡುತ್ತದೆ. ದೊಡ್ಡ ಹುಲಿಯು ಗುರುವಾದರೆ, ಮರಿ ಹುಲಿಯು ಶಿಷ್ಯನಂತೆ. ನೀರಿನಲ್ಲಿ ತನ್ನ ಪ್ರತಿಬಿಂಬವನ್ನು ತೋರಿಸಿಕೊಡುವ ಮೂಲಕ ದೊಡ್ಡ ಹುಲಿಯು, ಮರಿ ಹುಲಿಗೆ ಸತ್ಯದರ್ಶನ ಮಾಡಿಸುತ್ತದೆ. ಅದೇ ರೀತಿ ಗುರು ತನ್ನ ಶಿಷ್ಯನ ಅಜ್ಞಾನವನ್ನು ತೊಲಗಿಸಿ, ಆತ್ಮದರ್ಶನ ಮಾಡಿಸುತ್ತಾನೆ.

### ನೀರಿನ ಘಟ ಮತ್ತು ಸೂರ್ಯ

''ಭಾವಿಸಿಕೊಳ್ಳಿ, ಸೂರ್ಯ ಮತ್ತು ನೀರಿನಿಂದ ತುಂಬಿದ ಹತ್ತು ಘಟ ಇಲ್ಲಿ ಇವೆ ಎಂದು. ಪ್ರತಿಯೊಂದು ಘಟದಲ್ಲೂ ಸೂರ್ಯನ ಪ್ರತಿಬಿಂಬವನ್ನು ನೋಡಬಹುದು. ಈಗ ಕಂಡು ಬರುತ್ತದೆ, ಒಬ್ಬ ನಿಜವಾದ ಸೂರ್ಯ ಮತ್ತು ಹತ್ತು ಪ್ರತಿಬಿಂಬಿತ ಸೂರ್ಯರು ಇರುವುದಾಗಿ. ಒಂದು ಪಕ್ಷ ಒಂಬತ್ತು ಘಟಗಳನ್ನು ಒಡೆದುಹಾಕಿಬಿಟ್ಟರೆ, ಉಳಿದುಕೊಳ್ಳುವುದು ಒಬ್ಬ ನಿಜವಾದ ಸೂರ್ಯ ಮತ್ತು ಆತನ ಒಂದು ಪ್ರತಿಬಿಂಬ. ಒಂದೊಂದು ಘಟವೂ ಒಂದೊಂದು ಜೀವವಿದ್ದ ಹಾಗೆ. ಪ್ರತಿಬಿಂಬದ ಮೂಲಕ ನಿಜವಾದ ಸೂರ್ಯನನ್ನು ಅರಿತುಕೊಳ್ಳಬಹುದು. ಜೀವಾತ್ಮನ ಮೂಲಕ ಪರಮಾತ್ಮನನ್ನು ಅರಿತುಕೊಳ್ಳಬಹುದು. ಜೀವಾತ್ಮ ಸಾಧನೆ ಭಜನೆ ಮಾಡಿದ್ದೇ ಆದರೆ, ಆತ ಪರಮಾತ್ಮನ ಸಾಕ್ಷಾತ್ಕಾರ ಪಡೆದುಕೊಳ್ಳಬಲ್ಲ. ಆ ಕೊನೆಯ ಘಟವನ್ನೂ ಒಡೆದುಹಾಕಿಬಿಟ್ಟ ನಂತರ ಏನು ಉಳಿದುಕೊಳ್ಳುತ್ತದೆ ಎಂಬುದನ್ನು ಬಾಯಿಯಿಂದ ಹೇಳಲಾಗುವುದಿಲ್ಲ.'' *(ಶ್ರೀರಾಮಕೃಷ್ಣ ವಚನವೇದ ಸಂ.೧, ಪು. ೪೧೫)*

ಬ್ರಹ್ಮನ ಅನಿರ್ವಚನೀಯತೆಯನ್ನು ಕುರಿತು ಹೇಳುವ ಉದಾಹರಣೆ ಇದು. ಮಡಕೆ ಅಥವಾ ಘಟವು ಜೀವನವನ್ನು ಸೂಚಿಸುತ್ತದೆ. ಒಂದು ಜೀವ, ಒಂದ ದೇಹ ಮಡಕೆಯಿದ್ದ ಹಾಗೆ. ಅದಕ್ಕೆ ಸೃಷ್ಟಿ, ಸ್ಥಿತಿ, ಲಯ – ಎಲ್ಲವೂ ಇದೆ. ಅದು ಎಲ್ಲ ವಿಕಾರಗಳಿಗೂ ಒಳಗಾಗುತ್ತದೆ. ಆದರೆ ಅದರ ಅಂತರಂಗದಲ್ಲಿರುವ ಚೈತನ್ಯವೇ ಆತ್ಮ – ಪರಮಾತ್ಮ. ಘಟದಲ್ಲಿರುವ ಸೂರ್ಯನಂತೆ ನಿಜವಾದ ಸೂರ್ಯನಿಗೂ ಪ್ರತಿಬಿಂಬಿತವಾದ ಸೂರ್ಯನಿಗೂ ವ್ಯತ್ಯಾಸವಿದೆ. ಅದೇ ರೀತಿ ಪರಮಾತ್ಮನಿಗೂ ಜೀವಾತ್ಮನಿಗೂ ವ್ಯತ್ಯಾಸವಿದೆ. ಆದರೆ ನಿಜವಾದ ಸೂರ್ಯನಿಲ್ಲದೆ ಸೂರ್ಯನ ಪ್ರತಿಬಿಂಬ ಬೀಳದು; ಪರಮಾತ್ಮನಿಲ್ಲದೆ ಜೀವಾತ್ಮನಿಗೂ ಅಸ್ತಿತ್ವವಿರದು. 'ಘಟವನ್ನು ಒಡೆದು ಹಾಕಿಬಿಟ್ಟರೆ'ಎನ್ನುವುದು ಪ್ರಾಪಂಚಿಕ ಬಂಧನವನ್ನು ದಾಟಿ ಹೋಗುವ, ಸಂಸಾರ ಬಂಧನವನ್ನು ಕಡಿದುಹಾಕುವ ಕ್ರಿಯೆಯನ್ನು ಸೂಚಿಸುತ್ತದೆ. ಅದನ್ನು ಮಾಡಿದಾಗ ಏನಾಗುತ್ತದೆ? ಸಾಕ್ಷಾತ್ಕಾರವಾದಾಗ ಏನಾಗುತ್ತದೆ, ಅದನ್ನು ಬಾಯಿಯಿಂದ ವರ್ಣಿಸಲಾಗುವುದಿಲ್ಲ. ಮಾತು, ಮನಸ್ಸು, ಬುದ್ಧಿಗಳನ್ನು ಮೀರಿದ ಪರಬ್ರಹ್ಮನ ಅವಸ್ಥೆ ಎಂತಹುದು ಎಂಬುದು ಅನುಭವಿಸಿದವನಿಗೆ ಮಾತ್ರ ಗೊತ್ತು. ಈ ರೀತಿ ಶ್ರೀರಾಮಕೃಷ್ಣರು ಇದನ್ನು ವಿವರಿಸುತ್ತಾರೆ.

### ಕನಸಿನಲ್ಲಿ ರಾಜನಾಗಿದ್ದ ಕಥೆ

ಶ್ರೀರಾಮಕೃಷ್ಣರು ಒಂದು ಬಾರಿ ಭಕ್ತರ ಮುಂದೆ ಮಾತನಾಡುತ್ತ, ಪ್ರಪಂಚವೂ ಒಂದು ಕನಸಿನಂತೆ; ಕನಸು ಎಷ್ಟರ ಮಟ್ಟಿಗೆ ಮಿಥ್ಯೆಯೋ ಎಚ್ಚರದ ಅವಸ್ಥೆಯೂ ಅಷ್ಟೇ ಮಿಥ್ಯೆ ಎಂಬುದನ್ನು ಒಂದು ಕಥೆಯ ಮೂಲಕ ವಿವರಿಸುತ್ತಾರೆ:

''ವೇದಾಂತದೃಷ್ಟಿಯಿಂದ ಜಾಗ್ರದವಸ್ಥೆಯೂ ಸತ್ಯವಾದುದಲ್ಲ. ಒಮ್ಮೆ ಒಬ್ಬ ಸೌದೆ ಕಡಿಯುವವ ಸ್ವಪ್ನ ಕಾಣುತ್ತಿದ್ದ. ಇನ್ನೊಬ್ಬ ಬಂದು ಆತನನ್ನು ಎಚ್ಚರಿಸಿಬಿಟ್ಟುದಕ್ಕಾಗಿ ಆತ ಸಿಟ್ಟುಗೊಂಡು ಕೂಗಿಕೊಂಡ: 'ನನ್ನನ್ನೇಕೆ ಎಚ್ಚರಿಸಿಬಿಟ್ಟೆ? ಸ್ವಪ್ನ ಕಾಣುತ್ತಿದ್ದೆ — ನಾನು ರಾಜನಾಗಿರುವ ಹಾಗೆ, ನನಗೆ ಏಳು ಮಕ್ಕಳಿರುವ ಹಾಗೆ. ಮಕ್ಕಳೆಲ್ಲರೂ ಒಳ್ಳೇ ವಿದ್ಯಾವಂತರಾಗಿಯೂ, ಧನುರ್ವಿದ್ಯಾಪಾರಂಗತರಾಗಿಯೂ ಬೆಳೆಯುತ್ತಿದ್ದರು. ನಾನು ಸಿಂಹಾಸನಾರೂಢನಾಗಿ ರಾಜ್ಯಭಾರ ಮಾಡುತ್ತಿದ್ದೆ. ನನ್ನ ಆ ಸುಖಮಯ ಸಂಸಾರವನ್ನು ಏಕೆ ನೀನು ಕೆಡಿಸಿಬಿಟ್ಟೆ?' ಆ ವ್ಯಕ್ತಿ ಹೇಳಿದ: 'ಅದು ಕೇವಲ ಸ್ವಪ್ನ, ಎಚ್ಚರಿಸಿದ್ದರಿಂದ ಯಾವ ರಾಜ್ಯ ಮುಳುಗಿಹೋಗಿಬಿಟ್ಟಿತು?' ಸೌದೆ ಕಡಿಯುವವ ಹೇಳಿದ: 'ತಿಳಿಗೇಡಿ! ನಿನಗೆ ಅರ್ಥವಾಗುತ್ತಿಲ್ಲ. ಈಗ ನಾನು ಸೌದೆ ಕಡಿಯುವವನಾಗಿರುವುದು ಎಷ್ಟು ಸತ್ಯವೋ, ಸ್ವಪ್ನದಲ್ಲಿ ನಾನು ರಾಜನಾಗಿದ್ದುದೂ ಅಷ್ಟೇ ಸತ್ಯ. ಸೌದೆ ಕಡಿಯುವವನಾಗಿರುವುದು ಸತ್ಯವಾಗಿದ್ದ ಪಕ್ಷದಲ್ಲಿ ರಾಜನಾಗಿದ್ದುದೂ ಸತ್ಯವೇ.''

*(ಅಲ್ಲೇ, ಸಂ.೧, ಪು. ೪೧೫)*

ಮಾಂಡೂಕ್ಯೋಪನಿಷತ್ತು ಅವಸ್ಥಾತ್ರಯಗಳನ್ನು ವಿವರಿಸಿ, ಈ ಮೂರು ಅವಸ್ಥೆಗಳನ್ನೂ ಮೀರಿದ ತುರೀಯಾವಸ್ಥೆಯೇ ಸತ್ಯ ಎನ್ನುತ್ತದೆ. ಈ ದೃಷ್ಟಿಯಿಂದ ಜಾಗ್ರತ್, ಸ್ವಪ್ನ, ಸುಷುಪ್ತಿಗಳು ಒಂದೇ ಸತ್ಯದ ವಿವಿಧ ಭಾಗಗಳು, ನಾಲ್ಕನೇ ಅವಸ್ಥೆಯಲ್ಲಿ ಅವೆಲ್ಲವೂ ಪೂರ್ಣತೆಯನ್ನು ಪಡೆಯುತ್ತವೆ. ಈ ಬಗೆಯ ಪೂರ್ಣತೆಯ ಭಾವವನ್ನು ಶ್ರೀರಾಮಕೃಷ್ಣರು 'ವಿಜ್ಞಾನ' ಎಂದು ಕರೆಯುತ್ತಿದ್ದರು. ಈ ರೀತಿ ಹಲವು ದೃಷ್ಟಾಂತಗಳ ಮೂಲಕ ಶ್ರೀರಾಮಕೃಷ್ಣರು ತಾವು ಕಂಡ ಆಧ್ಯಾತ್ಮಿಕ ಅನುಭವಗಳನ್ನು ಸರಳವಾಗಿ ವಿವರಿಸುತ್ತಾರೆ, ವೇದಾಂತ ದರ್ಶನಕ್ಕೆ ತಮ್ಮದೇ ಆದ ಹೊಸ ಕೊಡುಗೆಯನ್ನು ನೀಡುತ್ತಾರೆ.

### ಅಕ್ಟೋಬರ್ ತಿಂಗಳ ಕಾರ್ಯಕ್ರಮಗಳು

| | | |
|---|---|---|
| ೧ | ಬುಧವಾರ | ಮಹಾನವಮಿ |
| ೨ | ಗುರುವಾರ | ವಿಜಯ ದಶಮಿ, ಶ್ರೀ ಮಧ್ವ ಜಯಂತಿ |
| ೩ | ಶುಕ್ರವಾರ | ಏಕಾದಶಿ |
| ೧೭ | ಶುಕ್ರವಾರ | ಏಕಾದಶಿ |
| ೨೦ | ಸೋಮವಾರ | ಶ್ರೀ ಕಾಳೀ ಪೂಜೆ, ದೀಪಾವಳಿ |